ಕೈಗಾರಿಕಾ ವಿಕೇಂದ್ರೀಕರಣಗೊಳಿಸುವ ಬಗ್ಗೆ.

೨೭೦. ಶ್ರೀ ಡಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೈಗಾರಿಕಾ ವಿಕೇಂದ್ರೀಕರಣಗೊಳಿಸುವ ದೃಷ್ಟಿಯಿಂದ ರಾಜ್ಯದ ಪ್ರತಿ ತಾಲ್ಲೂಕಿನಲ್ಲಿಯೂ ಕೈಗಾರಿಕಾ ಎಸ್ಟೇಟುಗಳನ್ನು ಪ್ರಾರಂಭಿಸಲಾಗುವುದೇ ?

ಆ) ಹಾಗಿದ್ದಲ್ಲಿ ಕೈಗಾರಿಕೆಯಲ್ಲಿ ಹಿಂದುಳಿದಿರುವ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿಯೂ ಒಂದೊಂದು ಕೈಗಾರಿಕಾ ಎಸ್ಟೇಟು ಪ್ರಾರಂಭಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ಎ. ಜೀವಿಜಯ (ಸಣ್ಣ ಕೈಗಾರಿಕಾ ಸಚಿವರು).—

ಅ) ರಾಜ್ಯದಲ್ಲಿರುವ ಪ್ರತಿಯೊಂದು ತಾಲ್ಲೂಕಿನಲ್ಲೂ ಸಾಧ್ಯವಾದಷ್ಟು ಮಟ್ಟಿಗೆ ಕೈಗಾರಿಕಾ ವಸಾಹತುವನ್ನು ಸ್ಥಾಪಿಸುವ ಪ್ರಸ್ತಾಪನೆಯಂ ಸರ್ಕಾರದಲ್ಲಿದೆ.

ಆ) ಚಿಕ್ಕನಾಯಕನಹಳ್ಳಿಯಲ್ಲಿ ಜಮೀನನ್ನು ಹೊಂದಿಸುವ ಪ್ರಸ್ತಾವನೆಯು ಸರ್ಕಾರದಲ್ಲಿದೆ. ಕೈಗಾರಿಕೆಗಳಿಗೆ ನಿವೇಶನವನ್ನು ಅಥವಾ ಷೆಡ್‌ಗಳನ್ನು ಒದಗಿಸುವ ಪ್ರಶ್ನೆಯು ಕೈಗಾರಿಕಾ ಸಮರ್ಥತೆ ಮತ್ತು ಸ್ಥಳೀಯ ಉದ್ಯಮ ಸಾಹಸಿಗಳ ಪ್ರತಿಕ್ರಿಯೆಯನ್ನು ಅವಲಂಬಿಸಿದೆ.

ಗಲಗಲಿಯಲ್ಲಿ ೩೩ ಕೆ. ವಿ. ಸ್ಟೇಶನ್ ನಿರ್ಮಾಣ.

೯೪(೭೨) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀಳಗಿ ತಾಲ್ಲೂಕಿನ ಗಲಗಲಿ ಗ್ರಾಮದಲ್ಲಿ ೩೩ ಕೆ. ವಿ. ಸ್ಟೇಷನ್ ನಿರ್ಮಿಸಲು ವಿದ್ಯುತ್ ಮಂಡಳಿ ಒಪ್ಪಿಕೊಂಡಿರುವುದು ನಿಜವೆ ?

ಆ) ಹಾಗಿದ್ದಲ್ಲಿ ನಿರ್ಮಾಣ ಕಾರ್ಯ ಆರಂಭವಾಗುವುದಂ ಯಾವಾಗ ಹಾಗೂ ಇದಕ್ಕಾಗಿ ಕೈಗೊಂಡಿರುವ ಪೂರ್ವಭಾವಿ ಸಿದ್ಧತೆಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಂ ಮತ್ತು ವಿದ್ಯುತ್ ಮಂತ್ರಿಗಳು).—

ಅ) ನಿಜ.

ಆ) ೧೯೮೮-೮೯ರಲ್ಲಿ ಗಲಗಲಿ ಗ್ರಾಮದಲ್ಲಿ ಒಂದು ೩೩/೧೧ ಕೆ. ವಿ. ಸ್ಟೇಷನ್ ನಿರ್ಮಾಣ ಕಾರ್ಯ ಕೈಗೊಳ್ಳಲು ಮಂಡಳಿ ಯೋಜಿಸಿದೆ. ಈ ಕಾರ್ಯ ಕೈಗೊಳ್ಳಬೇಕಾದರೆ ಪೂರ್ವಭಾವಿಯಾಗಿ ಮಂಥೋಳ ಸ್ಟೇಷನ್‌ನಲ್ಲಿ ಒಂದು ೧೧೦/೩೩ ಕೆ. ವಿ. ೧೦ ಎಂ. ವಿ. ಎ. ಟ್ರಾನ್ಸ್‌ಫಾರ್ಮರ್ ಹಾಕಬೇಕಾಗುವುದು. ಇದನ್ನು ಮಂಡಳಿ ೧೯೮೭–೮೮ ರಲ್ಲಿ ಮಾಡಲು ಕಾರ್ಯಕ್ರಮ ಹಾಕಿಕೊಂಡಿದೆ.

೧೯೮೮–೮೯ರಲ್ಲಿ ಮಂಥೋಳ್‌ನಿಂದ ಗಲಗಲಿಗೆ ೩೩ ಕೆ. ವಿ. ಲೈನ್ ಹಾಕುವ ಕಾರ್ಯ ಮತ್ತು ಗಲಗಲಿಯಲ್ಲಿನ ಸ್ಟೇಷನ್‌ನ ಕಾರ್ಯ ಕೈಗೆತ್ತಿಕೊಳ್ಳಲು ಮಂಡಳಿ ಕಾರ್ಯಕ್ರಮ ಹಾಕಿಕೊಂಡಿದೆ.